

‘ಕನ್ನಡ ಚಲನಚಿತ್ರ ಕಲಾವಿದರ ಸಂಘ’ದ ಹೆಮ್ಮೆಯ ಕಾಣಿಕೆ ‘ರಣಧೀರ ಕಂಠೀರವ’

# ಕಳೆದುಹೋಯಿತೆ ವಿಶ್ವಾಸ?

**ಕನ್ನಡ ಚಿತ್ರರಂಗ ಅಭಿಮಾನಿ ದೇವರುಗಳ ವಿಶ್ವಾಸ ಕಳೆದುಕೊಂಡಿದೆ. ಹೀಗೆ ವಿಶ್ವಾಸ ಕಳೆದುಕೊಳ್ಳಲು ಕಾರಣಗಳೇನು? ಸ್ವಯಂಕೃತ ಅಪರಾಧಗಳೇನು? ಮುಂದೆ ಮಾಡಬೇಕಾದುದೇನು?**

**■ ರಘುನಾಥ ಚ.ಹ.**

1930ರ ಆಸುಪಾಸು. ಕನ್ನಡದಲ್ಲಿ ಸಿನಿಮಾ ನಿರ್ಮಿಸಬೇಕೆಂಬ ಆಸೆಯಿಂದ ತಮಿಳು ನಿರ್ಮಾಪಕರನ್ನು ಸಂಪರ್ಕಿಸಿದ ಆರ್. ನಾಗೇಂದ್ರ ರಾವ್ ಅವರಿಗೆದುರಾದ ಪ್ರತಿಕ್ರಿಯೆ: ‘ಕನ್ನಡ ಸಿನಿಮಾ ಮಾಡುವ ಬದಲು ಕಲ್ಲು ಕಬ್ಬಿಣ ಮಾರುವ ಕೆಲಸ ಮಾಡೋದು ಒಳ್ಳೆಯದು.’

ಕನ್ನಡ ಸಿನಿಮಾ ನಿರ್ಮಿಸುವುದಕ್ಕಿಂತಲೂ ಕಲ್ಲು ಕಬ್ಬಿಣ ಮಾರಾಟದಲ್ಲಿ ಹೆಚ್ಚಿನ ಲಾಭವಿದೆ ಎನ್ನುವ ತಮಿಳು ನಿರ್ಮಾಪಕರ ಮಾತಿನಿಂದ ಆರೆನ್ನಾರ್ ನಿರಾಶರಾಗಲಿಲ್ಲ. ಮರಳಿ ಯತ್ನವ ಮಾಡು ಎನ್ನುವಂತವರು ನಿರ್ಮಾಪಕರ ಹುಡುಕಾಟ ಮುಂದುವರೆಸಿದರು. ಆ ಹುಡುಕಾಟದಲ್ಲಿ ಕಾಲಿಗೆ ತೊಡರಿದ ಬಳ್ಳಿ, ಡುಂಗಾಜಿ ಎನ್ನುವ ವ್ಯಾಪಾರಿ.

ಬೆಂಗಳೂರಿನ ಚಿಕ್ಕಪೇಟೆಯಲ್ಲಿ ಪಾತ್ರೆ ವ್ಯಾಪಾರ ಮಾಡುತ್ತಿದ್ದ ಷಾ ಚಮನ್‌ಲಾಲ್ ಡುಂಗಾಜಿ ಅವರಿಗೆ ಕನ್ನಡ ಸಿನಿಮಾ ನಿರ್ಮಿಸಿ ಲಾಭ ಮಾಡಿಕೊಳ್ಳುವ ಉಮೇದು, ಭ್ರಮೆಯೇನೂ ಇರಲಿಲ್ಲ. ಅನ್ನ–ಜೀವನ ನೀಡಿದ ಕನ್ನಡ ನಾಡಿಗೆ ಏನನ್ನಾದರೂ ಕೊಡಬೇಕೆನ್ನುವ– ಕೆರೆಯ ನೀರನು ಕೆರೆಗೆ ಮರಳಿಸಬೇಕೆನ್ನುವ ವಿವೇಕ– ಡುಂಗಾಜಿ ಅವರಿಗೆ ‘ಸತಿ ಸುಲೋಚನಾ’ ಸಿನಿಮಾ ನಿರ್ಮಿಸಲು ಪ್ರೇರಣೆಯಾಯಿತು. ಮುಂದಿನದು ಇತಿಹಾಸ.

ಕನ್ನಡ ವಾಕ್ಚಿತ್ರ ಪರಂಪರೆಗೆ ಮುನ್ನುಡಿ ಬರೆದ ‘ಸತಿ ಸುಲೋಚನಾ’ ತೆರೆ ಕಂಡದ್ದು ಮಾರ್ಚ್ 3, 1934ರಂದು. ಆ ಐತಿಹಾಸಿಕ ಘಟನೆಗೆ ಈ ವರ್ಷದ ಮಾರ್ಚ್ 3ಕ್ಕೆ 90 ವರ್ಷ ತುಂಬಿತು. ಈ ಒಂಬತ್ತು ದಶಕಗಳ ನಂತರ ‘ಕನ್ನಡ ಸಿನಿಮಾ ಮಾಡುವ ಬದಲು ಕಲ್ಲು ಕಬ್ಬಿಣ ಮಾರುವ ಕೆಲಸ ಮಾಡೋದು ಒಳ್ಳೆಯದು’ ಎನ್ನುವ ಮಾತಿನ ತಥ್ಯದಲ್ಲೇನಾದರೂ ವ್ಯತ್ಯಾಸ ಆಗಿದೆಯೇ? ಉಹುಂ, ಈಗಲೂ ಬಹಳಷ್ಟು ಕನ್ನಡ ಸಿನಿಮಾಗಳ ಪಾಲಿಗೆ ಈ ಮಾತು ಸತ್ಯವೇ ಆಗಿದೆ. ಅಲ್ಪ ಸ್ವಲ್ಪ ಲಾಭದ ಮಾತಿರಲಿ, ಹೂಡಿದ ಬಂಡವಾಳಕ್ಕೂ ತತ್ವಾರ ಎನ್ನುವ ಅನುಭವ ಬಹುತೇಕ ನಿರ್ಮಾಪಕರದ್ದಾಗಿದೆ. ಕನ್ನಡ ಚಿತ್ರರಂಗದಲ್ಲೀಗ ಹಾಹಾಕಾರದ ಸಮಯ.

## ಚಿತ್ರೋದ್ಯಮಕ್ಕಿಲ್ಲ ಮುಂಗಾರು ಮಳೆ

ಸುಡುಧಗೆಯ ಬೇಸಿಗೆಯ ನಂತರ ನಾಡಿನಲ್ಲಿ ಸುರಿಯುತ್ತಿರುವ ಮುಂಗಾರುಮಳೆ ಸಮಾಧಾನ ಮೂಡಿಸುವಂತಿದೆ. ಕನ್ನಡ ಚಿತ್ರರಂಗದ ತಳಮಳ ಮಾತ್ರ ಮುಂದುವರೆದಿದೆ. ‘ಮತ್ತೆ ಮುಂಗಾರು’ ಎನ್ನುವುದು ಕನ್ನಡ ಸಿನಿಮಾದ ಮಟ್ಟಿಗೆ ಮರೀಚಿಕೆಯಂತಾಗಿದೆ.

ಕನ್ನಡ ಚಿತ್ರರಂಗಕ್ಕೆ ಇಂಥ ಬಿಕ್ಕಟ್ಟು ಹೊಸತೇನಲ್ಲ ಎಂದು ನಟ–ನಿರ್ಮಾಪಕ–ನಿರ್ದೇಶಕ ರಿಷಬ್ ಶೆಟ್ಟಿ ಹೇಳಿದ್ದಾರೆ. ರಿಷಬ್‌ರ ಮಾತು ನಿಜ. ಒಂಬತ್ತು ದಶಕಗಳ ಅವಧಿಯಲ್ಲಿ ಚಿತ್ರೋದ್ಯಮ ತುರ್ತು ನಿಗಾ ಘಟಕ ಸೇರಿಯೂ ಚೇತರಿಸಿಕೊಂಡ ಉದಾಹರಣೆಗಳಿವೆ. ಈಗಲೂ ಆ ಚೇತರಿಕೆ ಸಾಧ್ಯ ಎನ್ನುವುದು ರಿಷಬ್ ಸೇರಿದಂತೆ ಹಲವರ ನಂಬಿಕೆ. ಆದರೆ, ಪರಿಸ್ಥಿತಿ ಅಷ್ಟು ಸರಳವಾಗಿದೆಯೆ? ಈ ಮೊದಲು, ಕನ್ನಡ ಚಿತ್ರೋದ್ಯಮಕ್ಕೆ ಉಸಿರುಕಟ್ಟಿದಾಗಲೆಲ್ಲ ಅಭಿಮಾನಿ ದೇವರುಗಳೆಂಬ ಅಶ್ವಿನಿ ದೇವತೆಗಳು ನೆರವಿಗೆ ಧಾವಿಸುತ್ತಿದ್ದರು. ರಾಜಕುಮಾರ್ ಎಂಬ ಮಾಂತ್ರಿಕ ಚಿತ್ರೋದ್ಯಮಕ್ಕೆ